|| ಶ್ರೀರಸ್ತು ||

ಶ್ರೀಮಚ್ಛಂಕರಭಗವತ್ಪಾದಾಚಾರ್ಯ ವಿರಚಿತ

ದಕ್ಷಿಣಾಮೂರ್ತಿ ಸ್ತೋತ್ರವು.

ಆತ್ಮಾರಾಮಯೋಗೀಕೃತ ಪ್ರತಿಪದ ಟೀಕಾ ತಾತ್ಪರ್ಯ
ಸಹಿತವಾದ ಈ ಪುಸ್ತಕವು

ಮೈಸೂರು ಶಿವಾನಂದ ಸುಬ್ರಹ್ಮಣ್ಯನಿಂದ

ಪರಿಶೋಧಿಸಲ್ಪಟ್ಟದು.

ಬೆಲೆ ೧ ಆಣೆ.

॥ ಶ್ರೀರಸ್ತು ॥

ಶ್ರೀಮಚ್ಛಂಕರಭಗವತ್ಪಾದಾಚಾರ್ಯ ವಿರಚಿತ

ದಕ್ಷಿಣಾಮೂರ್ತಿ ಸ್ತೋತ್ರವು

ಆತ್ಮಾರಾಮಯೋಗೀಕೃತ ಪ್ರತಿಪದ ಟೀಕಾ ತಾತ್ಪರ್ಯ
ಸಹಿತವಾದ ಈ ಪುಸ್ತಕವು

ಮೈಸೂರು ಶಿವಾನಂದ ಸುಬ್ರಹ್ಮಣ್ಯನಿಂದ
ಪರಿಶೋಧಿಸಲ್ಪಟ್ಟು

ಮೈಸೂರು ಕೋದಂಡರಾಮ ಪ್ರೆಸ್ಸಿನಲ್ಲಿ ಮುದ್ರಿಸಿ
ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ ೧,೫೦೦ ಪ್ರತಿಗಳು

೧೯೨೩

034

ಮೈ ಸೂ ರು

ಕೋದಂಡರಾಮ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೯೩೩

ಶ್ರೀ ಗಣಪತಿಶಾರದಾಗುರುಭ್ಯೋ ನಮಃ.

ದಕ್ಷಿಣಾಮೂರ್ತಿ ಸ್ತೋತ್ರಂ.

ಶ್ಲೋ || ಶೃತಿಸ್ಮೃತಿಪುರಾಣಾನಾ ಮಾಲಯಂ ಕರುಣಾಲಯಂ |
ನಮಾಮಿ ಭಗವತ್ಪಾದ ಶಂಕರಂ ಲೋಕಶಂಕರಂ ||

ಮಂಗಲಂ.

ಮೌನವ್ಯಾಖ್ಯಾ ಪ್ರಕಟಿತ ಪರಬ್ರಹ್ಮ ತತ್ತ್ವಂಯುವಾನಂ| ವರ್ಷಿ ಷ್ಠಾಂತೇವ ಸದೃಷಿ ಗಣೈರಾವೃತಂ ಬ್ರಹ್ಮನಿಷ್ಠೈಃ ॥ ಆಚಾರ್ಯೇಂದ್ರಂ ಕರಕಲಿತ ಚಿನ್ಮುದ್ರ ಮಾನಂದಮೂರ್ತಿಂ| ಸ್ವಾತ್ಮಾರಾಮಂ ಮುದಿತ ವದನಂ ದಕ್ಷಿಣಾಮೂರ್ತಿ ಮೀಡೇ ॥

ಟೀಕಾ॥ ಈ ಶ್ಲೋಕವು ಈ ಸ್ತೋತ್ರಕ್ಕೆ ವ್ಯಾಖ್ಯಾನವಂ ಮಾಡಿದ ಪೂರ್ವಪಂಡಿತರಿಂದ ಗ್ರಹಿಸಲ್ಪಡದಿದ್ದಾಗ್ಯೂ,

ಮೂರ್ತಿಧ್ಯಾನಾರ್ಥವಾಗಿ ಉಪಾಸಕರಿಂದಂಗೀಕರಿಸಲ್ಪಟ್ಟು ಈ ಸ್ತೋತ್ರದ ಆರಂಭದೊಳ್ ಪೇಳಲ್ಪಡುವದರಿಂದ ಇದರ ಅರ್ಥವು ವಿವರಿಸಲ್ಪಡುತ್ತಲಿದೆ.

(ಮೌನ) ವಾಙ್ನಿಯಮವೆಂಬ, (ವ್ಯಾಖ್ಯಾ) ಅರ್ಥ ಬೋಧಕವಾದ ವ್ಯಾಪಾರದಿಂದ, (ಪ್ರಕಟಿತ) ಪ್ರಕಾಶಿಸಲ್ಪಟ್ಟಂಥಾ, (ಪರಬ್ರಹ್ಮ) ಅನುಭವ ಮಾತ್ರ ಗಮ್ಯವಾದ ಸ್ವರೂಪ ಚೈತನ್ಯದ, (ತತ್ತ್ವಂ) ಪರಿಪೂರ್ಣ ಭಾವವುಳ್ಳಂಥಾ (ಯುವಾನಂ) ಯೌವ್ವನಾವಸ್ಥೆಯಿಂ ಕೂಡಿದ ಶರೀರವುಳ್ಳಂಥಾ, (ಬ್ರಹ್ಮನಿಷ್ಠೈಃ) ಬ್ರಹ್ಮ-ಪರಬ್ರಹ್ಮಸ್ವರೂಪಜ್ಞಾನದಲ್ಲಿ, ನಿಷ್ಠೈಃ-ಅತ್ಯಂತಾಸಕ್ತಿಯುಳ್ಳಂಥಾ, (ವರ್ಷಿಷ್ಠಾಂತೇವಸದೃಷಿಗಣೈಃ) ವರ್ಷಿಷ್ಟ-ವೃದ್ಧರಾದಂಥಾ, ಅಂತೇವಸತ್-ಶಿಷ್ಯರಾದಂಥಾ, ಋಷಿ-ಶಬ್ದಬ್ರಹ್ಮಪಾರಂಗತರಾದ ತಪಸ್ವಿಗಳ, ಗಣೈಃ-ಸಮೂಹಗಳಿಂದ, (ಆವೃತಂ) ಸುತ್ತುವರಿಯಲ್ಪಟ್ಟಂಥಾ, (ಕರಕಲಿತಚಿನ್ಮುದ್ರಂ) ಕರ-ಕೈಯಲ್ಲಿ, ಕಲಿತ-ಧರಿಸಲ್ಪಟ್ಟಂಥಾ, ಚಿನ್ಮುದ್ರಂ-ಜ್ಞಾನಮುದ್ರೆಯುಳ್ಳಂಥಾ, (ಆಚಾರ್ಯೇಂದ್ರಂ) ಆಚಾರ್ಯ-ಸದಾಚಾರಗಳಲ್ಲಿ ಜನಗ

ಳಂ ನಿಲ್ಲಿಸುವ ಗುರುಜನಗಳಿಗೆ, ಇಂದ್ರಂ-ಶ್ರೇಷ್ಠನಾದಂಥಾ (ಸ್ವಾತ್ಮಾರಾಮಂ) ನಿರ್ವಿಕಲ್ಪಜ್ಞಾನದಿಂದ ಸ್ವರೂಪದಲ್ಲೇ ಕ್ರೀಡಿಸುತ್ತಿರುವಂಥಾ, (ಮುದಿತವದನಂ) ಉಲ್ಲಾಸಯುಕ್ತವಾದ ಮುಖವುಳ್ಳಂಥಾ, (ಆನಂದಮೂರ್ತಿಂ) ಅಖಂಡಾನಂದ ಸ್ವರೂಪನಾದಂಥಾ, (ದಕ್ಷಿಣಾಮೂರ್ತಿಂ) ಜ್ಞಾನ ಸ್ವರೂಪನಾದ ದಕ್ಷಿಣಾಮೂರ್ತಿಯನ್ನು, (ಈಡೇ) ಸ್ತುತಿಸುತ್ತೇನೆಯೆಂದು ಶ್ಲೋಕಾರ್ಥ.

ತಾ|| ಶಬ್ದಬ್ರಹ್ಮಜ್ಞಾನದಲ್ಲಿ ಪಾರಂಗತರಾಗಿ, ಪರಬ್ರಹ್ಮ ಸ್ವರೂಪವಂ ತಿಳಿಯಲಿಚ್ಛೆಯುಳ್ಳ ಮಹರ್ಷಿಗಳು ವಿದ್ಯಾರ್ಥಿಗಳಾಗಿ ಬರುವಲ್ಲಿ, ಸಕ್ಕರೆಯ ಸೀಯಂತೆ ಅನುಭವ ಮಾತ್ರಗಮ್ಯವಾದ ಪರಬ್ರಹ್ಮವು ಅದ್ವಯವಾದ್ದರಿಂದ ವಾಕ್ಕಿಗೂ, ಮನಸ್ಸಿಗೂ ಕೂಡ ಗೋಚರವಾಗಲಾರದು. ಆದ್ದರಿಂದ ಆ ವಸ್ತುವು ಅಲಕ್ಷ್ಯವೆನಿಸುವುದು. ಆದ್ದರಿಂದೀ ವಿಷಯದಲ್ಲಿ ಮಾತುಗಳಿಂದುಪಯೋಗವಿಲ್ಲವೆಂಬ ತಾತ್ಪರ್ಯದಿಂದ ಗುರುಮೂರ್ತಿಯು ಸುಮ್ಮನಿದ್ದನು. ಆದಾಗ್ಯೂ ಆ ಪರಮೇಶ್ವರನು ಸರ್ವಪ್ರಾಣಿಗಳಿಗೂ ಬುದ್ಧಿಪ್ರೇರಕನಾದ್ದರಿಂದ ಆತನ

ದರ್ಶನ ಮಾತ್ರದಿಂದಲೇ ಆ ಜ್ಞಾನವುಂಟಾಗಲು ಕೃತಾರ್ಥರಾದ ಮುನಿಗಳು ಅವನ ಸಮೀಪದಲ್ಲೇ ಕುಳಿತುಕೊಂಡರೆಂದು ದೊಡ್ಡವರು ಕಥೆಯಂ ಪೇಳುವರು. ಈ ಪರಮೇಶ್ವರನು ಸಜಾತೀಯ ವಿಜಾತೀಯ ಸ್ವಗತಭೇದಜ್ಞಾನವಿಲ್ಲದೆ ಸರ್ವಾತ್ಮಭಾವದಿಂದಿರುವನಾದ್ದರಿಂದ ಉಪದೇಶವಂ ಮಾಡುತ್ತಿದ್ದರೂ, ಮೌನಿಯಾಗಿರುವನೆಂತಲೇ ತಿಳಿಯಬಹುದು.

ಮೂ॥ ವಿಶ್ವಂದರ್ಪಣದೃಶ್ಯಮಾನನಗರೀತುಲ್ಯಂ
ನಿಜಾಂತರ್ಗತಂ ಪಶ್ಯನ್ನಾತ್ಮನಿಮಾಯಯಾ
ಬಹಿರಿವೋದ್ಭೂತಂ ಯಥಾನಿದ್ರಯಾ|ಯ
ಸ್ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾ
ತ್ಮಾನಮೇವಾದ್ವಯಂ ತಸ್ಮೈ ಶ್ರೀಗುರು
ಮೂರ್ತಯೇ ನಮ ಇದಂ ಶ್ರೀದಕ್ಷಿಣಾ
ಮೂರ್ತಯೇ॥

ಟೀಕಾ॥ (ಯಃ) ಯಾವನು, (ದರ್ಪಣದೃಶ್ಯಮಾನನಗರೀತುಲ್ಯಂ) ದರ್ಪಣ–ಕನ್ನಡಿಯಲ್ಲಿ, ದೃಶ್ಯಮಾನ–ಪ್ರತಿ

ಬಿಂಬರೂಪವಾಗಿ ಕಾಣುತ್ತಲಿರುವಂಥಾ ನಗರೀ-ಪಟ್ಟಣಕ್ಕೆ
ತುಲ್ಯಂ-ಸರಿಯಾಗಿ (ನಿಜಾಂತರ್ಗತಂ) ತನ್ನ ಅಂತಃಕರಣ
ವನ್ನು ಹೊಂದಿರುವಂಥಾ (ವಿಶ್ವಂ) ಪ್ರಪಂಚವನ್ನೂ (ನಿದ್ರ
ಯಾಯಥಾ) ನಿದ್ರೆಯಿಂದ ಹ್ಯಾಗೋ ಹಾಗೆ (ಮಾಯ
ಯಾ) ಸ್ವರೂಪಾಜ್ಞಾನದಿಂದ (ಆತ್ಮನಿ) ತನ್ನಲ್ಲಿ (ಬಹಿಃ)
ಹೊರಗೆ (ಉದ್ಭೂತಮಿವ) ಹುಟ್ಟಿರುವದರೋಪಾದಿಯಲ್ಲಿ
(ಪಶ್ಯನ್ಸನ್) ನೋಡುತ್ತಲಿರುವಂಥಾವನಾಗಿ (ಪ್ರಬೋಧ
ಸಮಯೇ) ಸ್ವರೂಪಜ್ಞಾನದಿಂದೆಚ್ಚರವಾದ ಕಾಲದಲ್ಲಿ (ಅ
ದ್ವಯಂ) ಸಜಾತೀಯ ವಿಜಾತೀಯ ಸ್ವಗತಭೇದವಿಲ್ಲದಿರು
ವಂಥಾ (ಸ್ವಾತ್ಮಾನಮೇವ) ತನಗೆ ಅಭಿನ್ನನಾದ ಪರಮಾತ್ಮ
ನನ್ನೇ, (ಸಾಕ್ಷಾತ್ಕುರುತೇ) ಪ್ರತ್ಯಕ್ಷವಾಗಿ ತಿಳಿಯುತ್ತಾನೆ
ಯೋ (ಶ್ರೀಗುರುಮೂರ್ತಯೇ) ಶ್ರೀಮಂತನಾಗಿ ಅಜ್ಞಾ
ನ ಪರಿಹಾರಕರವಾದ. ಸ್ವರೂಪವುಳ್ಳಂಥಾ (ತಸ್ಮೈಶ್ರೀ
ದಕ್ಷಿಣಾಮೂರ್ತಯೇ) ಸತ್ಯಜ್ಞಾನಾನಂದ ಸ್ವರೂಪನಾದ
ಆ ದಕ್ಷಿಣಾಮೂರ್ತಿಗೋಸ್ಕರ (ಇದಂನಮಃ) ಈ ನಮಸ್ಕಾ
ರವೆಂದು ಶ್ಲೋಕಾರ್ಥ.

ತಾ || ಜಾಗ್ರದವಸ್ಥೆಯಲ್ಲಿ ಕಂಡ ಲೋಕವ್ಯವಹಾರವು ಮನಸ್ಸಿಗೆ ಬಂದಿರಲಾಗಿ ಅದನ್ನೇ ಸ್ವಪ್ನವಾಗಿ ಕಂಡು, ಎಚ್ಚರವಾದ ಬಳಿಕ ಯಾವ ವಿಕಾರವೂ ಇಲ್ಲದೆ ತಾನೊಬ್ಬನೇ ಇರುವೆನೆಂದು ಹ್ಯಾಗೆ ಮನುಷ್ಯನು ತಿಳಿಯುವನೋ, ಅದೇ ಪ್ರಕಾರವಾಗಿ, ಅನಾದಿಯಾದ ಸ್ವರೂಪಾಜ್ಞಾನದಿಂದ ಅಂತಃಕರಣದಲ್ಲಿ ವಾಸನಾತ್ಮಕವಾಗಿರುವ ಪ್ರಪಂಚವನ್ನೇ ಹೊರಗೆ ಇರುವಂತೆ ನೋಡುವ ಆತ್ಮನು ಗುರೂಪದೇಶದಿಂ ಸ್ವರೂಪ ಜ್ಞಾನವುದಯಿಸಲು, ಸತ್ಯಜ್ಞಾನಾನಂದ ಸ್ವರೂಪನಾದ ಪರಮಾತ್ಮನೇ ತಾನೆಂದು ತಿಳಿಯುವನು. ಯಾವನಿಗೆ ಸ್ವರೂಪದ ಅಜ್ಞಾನದಿಂದ ಜಗದ್ಭಾಸನೆಯಿರುವದೋ, ಅವನಿಗೆ ದೃಶ್ಯವಾದ ಪದಾರ್ಥವು ಜಗತ್ತಾಗಿಯೂ, ತನಿಗೆ ಭಿನ್ನವಾಗಿಯೂ ತೋರುತ್ತಿರುವದು. ಯಾವನಿಗೆ ಮಹಾವಾಕ್ಯಾರ್ಥ ವಿಚಾರದಿಂ ಸ್ವರೂಪಜ್ಞಾನವುಂಟಾಗಿ, ಬ್ರಹ್ಮವೇ ತಾನೆಂಬ ವಾಸನೆಯು ಸಿದ್ಧವಾಗಿರುವದೋ, ಅವನಿಗೆ ಜಗವೆಲ್ಲವೂ ಸ್ವಪ್ರಕಾಶರೂಪವಾಗಿ ಕಾಣುತ್ತಿರುವದೆಂದು ತಾತ್ಪರ್ಯ.

ಅ || ಜಗದ್ಗುರುಗಳಾದ ಶಂಕರಾಚಾರ್ಯರು ಸ್ವಾನುಭವವಂ ಜನಗಳಿಗೆ ತಿಳುಪಲೋಸುಗ ಈ ಸ್ತುತಿಯಂ ಪೇಳಿರುವರೆಂದು ತಿಳಿಯತಕ್ಕದ್ದು ||೧||

ಮೂ|| ಬೀಜಸ್ಯಾಂತರಿವಾಂಕುರೋ ಜಗದಿದಂ
ಪ್ರಾಙ್ನಿರ್ವಿಕಲ್ಪಂ ಪುನರ್ಮಾಯಾಕಲ್ಪಿತ ದೇಶ
ಕಾಲ ಕಲನಾ ವೈಚಿತ್ರ್ಯ ಚಿತ್ರೀಕೃತಂ | ಮಾ
ಯಾವೀವ ವಿಜೃಂಭಯತ್ಯಪಿ ಮಹಾ
ಯೋಗೀ ವಯಸ್ಸ್ವೇಚ್ಛಯಾ ತಸ್ಮೈಶ್ರೀ
ಗುರುಮೂರ್ತಯೇನಮಃ ||

ಟೀಕಾ|| (ಬೀಜಸ್ಯ) ಬೀಜದ, (ಅಂತಃ) ಒಳಗೆ, (ಅಂಕುರಇವಾ) ಮೊಳಕೆಯೋಪಾದಿಯಲ್ಲಿ, (ಪ್ರಾಕ್) ಸೃಷ್ಟಿಗೆ ಪೂರ್ವದಲ್ಲಿ, (ನಿರ್ವಿಕಲ್ಪಂ) ನಾಮರೂಪಾದಿ ಭೇದಗಳಿಲ್ಲದೆ ತನಗೆ ಅಭಿನ್ನವಾಗಿದ್ದಂಥಾ, (ಇದಂಜಗತ್) ಈ ಜಗತ್ತನ್ನೂ, (ಪುನಃ) ಮತ್ತೂ, (ಮಾಯಾಕಲ್ಪಿತ ದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಂ) ಮಾಯಾ-ಒಂದನ್ನು ಮತ್ತೊಂದಾಗಿ ತೋರುವ ಮೋಹಕವಾದ ಶಕ್ತಿಯಿಂದ, ಕಲ್ಪಿ

ಕ—ಮಾಡಲ್ಪಟ್ಟಂಥಾ, ದೇಶಕಾಲಕಲನಾ—ದೇಶಕಾಲಕಲ್ಪನೆ ಯಿಂದುಂಟಾದ, ವೈಚಿತ್ರ್ಯ—ನಾಮರೂಪಾದಿ ಭೇದಗಳಿಂದ, ಚಿತ್ರೀಕೃತಂ—ಆಶ್ಚರ್ಯಕರವಾಗಿ ನಿರ್ಮಿಸಲ್ಪಟ್ಟಂಥಾದ್ದನ್ನಾಗಿ, (ಮಾಯಾವೀವ—) ಇಂದ್ರಜಾಲ ವಿದ್ಯದವನಂತೆಯೂ, (ಮಹಾಯೋಗೀವಾಪಿ) ಯೋಗಸಿದ್ಧನಾದ ಪುರುಷನಂತೆ ಯೂ, (ಯಃ) ಯಾವನು, (ಸ್ವೇಚ್ಛಯಾ) ತನ್ನ ಇಚ್ಛಾ ಶಕ್ತಿಯಿಂದ, (ವಿಜೃಂಭಯತಿ) ಪ್ರಕಾಶಪಡಿಸುತ್ತಾನೆಯೋ, ಅಂಥಾ ಗುರುಮೂರ್ತಿಯಾದ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ|| ಇಂದ್ರಜಾಲದ ಆಟದವನು ಮೊದಲು ಬೀಜಮಾ ತ್ರವಂ ತೋರಿಸಿ, ಜನಗಳಂ ಮೋಹಪಡಿಸುವ ತನ್ನ ಮಾಯಾ ಶಕ್ತಿಯಿಂದ ಎಲೆ, ಚಿಗುರು, ಹೂವು, ಕಾಯಿ, ಹಣ್ಣುಗಳಿಂ ಕೂಡಿದ ದೊಡ್ಡ ವೃಕ್ಷವನ್ನಾಗಿ ಹ್ಯಾಗೆ ತೋರಿಸುವನೋ, ಮತ್ತು ವಿಶ್ವಾಮಿತ್ರನು ತಪಶ್ಶಕ್ತಿಯಿಂದ ತ್ರಿಶಂಕುಸ್ವರ್ಗವಂ ಹ್ಯಾಗೆ ನಿರ್ಮಿಸಿದನೋ, ಅದೇ ರೀತಿಯಾಗಿ ನಾಮರೂಪ ಗಳಿಲ್ಲದೆ ಅಭಿನ್ನವಾಗಿ ತನ್ನಲ್ಲಿರುವ ಜಗವನ್ನು ನಾಮರೂಪಾ

ದಿ ಭೇದಗಳಿಂ ಕೂಡಿರುವದನ್ನಾಗಿ ಪರಮಾತ್ಮನೂ ಸ್ವೇಚ್ಛೆಯಿಂದಲೇ ಪ್ರಕಾಶಪಡಿಸುವನು. ಅಂದರೆ ತಾನೇ ಅಜ್ಞಾನಿಗಳಿಗೆ ಜಗದ್ರೂಪನಾಗಿ ಕಾಣ್ಬರುವನೆಂದು ತಾತ್ಪರ್ಯ ||೪||

ಮೂ|| ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಗಂ ಭಾಸತೇ ಸಾಕ್ಷಾತ್ತತ್ತ್ವಮಸೀತಿವೇದವಚಸಾ ಯೋಬೋಧಯತ್ಯಾಶ್ರಿತಾನ್ । ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಂಭೋನಿಧೌ ತಸ್ಮೈ ಶ್ರೀಗುರುಮೂರ್ತಯೇ—

ಟೀಕಾ|| (ಸದಾತ್ಮಕಂ) ಸತ್ಯಸ್ವರೂಪವಾದಂಥಾ, (ಯಸ್ಯ) ಯಾವನ, (ಸ್ಫುರಣಮೇವ) ಪ್ರಕಾಶವೇ. (ಅಸತ್ಕಲ್ಪಾರ್ಥಗಂ) ಅಸತ್ಕಲ್ಪ–ಶಶಶೃಂಗಾದಿ ತುಚ್ಛಪದಾರ್ಥಕ್ಕೆ ಸಮಾನವಾದ, ಅರ್ಥ–ಆಕಾಶಾದಿ ಕಾರ್ಯಗಳನ್ನು, (ಗಂ) ಹೊಂದಿರುವಂಥಾದ್ದಾಗಿ, (ಭಾಸತೇ) ಪ್ರಕಾಶಿಸುತ್ತಲಿದೆಯೋ, (ಯಃ) ಯಾವನು, (ಆಶ್ರಿತಾನ್) ಭಕ್ತರನ್ನು ಕು

ರಿತು, (ತತ್ತ್ವಮಸೀತಿ) ಜಗತ್ಕಾರಣವಾದ ಬ್ರಹ್ಮವೇ ನೀನೆಂದು, (ವೇದವಚಸಾ) ಉಪನಿಷತ್ತಿನ ವಾಕ್ಯದಿಂದ, (ಸಾಕ್ಷಾತ್) ಪ್ರತ್ಯಕ್ಷವಾಗಿ, (ಬೋಧಯತಿ) ತಿಳಿಸುತ್ತಾನೆಯೋ, (ಯಸ್ಸಾಕ್ಷಾತ್ಕರಣಾತ್) ಆ ಪರಮಾತ್ಮನೇ ನಾನೆಂಬ ನಿಶ್ಚಯರೂಪವಾದ ಯಾವನ ಸಾಕ್ಷಾತ್ಕಾರದಿಂದ (ಭವಾಂಭೋನಿಧೌ) ಸಮುದ್ರದಂತೆ ಅಪಾರವಾಗಿರುವ ಅಜ್ಞಾನರೂಪವಾದ ಸಂಸಾರದಲ್ಲಿ (ಪುನರಾವೃತ್ತಿಃ) ತಿರುಗಿ ಬರೋಣವು, (ನ) ಇಲ್ಲವೋ, (ಶ್ರೀಗುರುಮೂರ್ತಯೇ, ...ತಸ್ಮೈಶ್ರೀ ದಕ್ಷಿಣಾಮೂರ್ತಯೆ–ಇದಂ ನಮಃ) ಜಗದ್ಗುರುವಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ|| ಅಸತ್ಯವಾದ ಈ ಜಗತ್ತು ಪರಮಾತ್ಮನ ಸತ್ತೆಯಿಂದ ಸತ್ಯವಾಗಿ ಕಾಣುತ್ತಲಿಧೆಯೆಂತಲೂ, ತನ್ನ ಉಪಾಸನೆಯಂ ಮಾಡುವರಿಗೆ ಸರ್ವಾತ್ಮನಾದ ಪರಮಾತ್ಮನೇ ತಾನೆಂಬ ತತ್ತ್ವಜ್ಞಾನವಂ ದಕ್ಷಿಣಾಮೂರ್ತಿಯುಂಟುಮಾಡುವನೆಂತಲೂ, ಬಾಲ್ಯದ ಅಜ್ಞಾನ ಹೋದ ಬಳಿಕ ಪ್ರತಿಬಿಂಬದಲ್ಲಿ

ಎರಡನೇ ಶಿಶುವೆಂಬ ಜ್ಞಾನ ಬರದಿರುವಂತೆ ತತ್ತ್ವಜ್ಞಾನಿಗೆ ದೇಹಾದಿ ಜಡಾತ್ಮನು ತಾನೆಂಬ ಅಜ್ಞಾನವು ಮರಳಿ ಬರುವುದಿಲ್ಲವೆಂತಲೂ ತಾತ್ಪರ್ಯ. ||೩||

ಮೂ॥ ನಾನಾಛಿದ್ರ ಘಟೋದರಸ್ಥಿತ ಮಹಾ
ದೀಪ ಪ್ರಭಾಭಾಸ್ವರಂ ಜ್ಞಾನಂಯಸ್ಯತು
ಚಕ್ಷುರಾದಿ ಕರಣದ್ವಾರಾಬಹಿಸ್ಪಂದತೇ
ಜಾನಾಮೀತಿ ತಮೇವಭಾಂತ ಮನುಭಾ
ತ್ಯೇತತ್ಸಮಸ್ತಂ ಜಗತ್ತಸ್ಮೈ ಶ್ರೀ—

ಟೀಕಾ॥ (ನಾನಾಛಿದ್ರ ಘಟೋದರಸ್ಥಿತ ಮಹಾದೀಪಪ್ರಭಾಭಾಸ್ವರಂ) ನಾನಾಛಿದ್ರ–ಅನೇಕ ಪ್ರಕಾರವಾದ ರಂಧ್ರಗಳುಳ್ಳಂಥಾ, ಘಟಾ–ಮಡಿಕೆಯ, ಉದರ--ಮಧ್ಯದಲ್ಲಿ, ಸ್ಥಿತ--ಇರುವಂಥಾ, ಮಹಾದೀಪ—ದೊಡ್ಡದೀಪದ, ಪ್ರಭಾ--ಕಾಂತಿಯೋಪಾದಿಯಲ್ಲಿ, ಭಾಸ್ವರಂ--ಪ್ರಕಾಶಮಾನವಾದಂಥಾ, (ಯಸ್ಯ) ಯಾವನ, (ಜ್ಞಾನಂತು) ಸ್ವರೂಪವಾದ ಜ್ಞಾನವಾದರೊ, (ಚಕ್ಷುರಾದಿಕರಣದ್ವಾರಾ) ನೇತ್ರ ಮೊದಲಾದ ಇಂದ್ರಿಯಗಳ ಮಾರ್ಗದಿಂದ, (ಬಹಿಃ)

ಹೊರಗೆ, (ಸ್ಪಂದತೆ) ಚಲಿಸುತ್ತಲಿದೆಯೊ, (ಜಾನಾವಿಾತಿ) ವಿಷಯಗಳಂ ತಿಳಿಯುತ್ತಲಿಧೇನೆಯೆಂದು, (ಏತತ್ಸಮಸ್ತಂ ಜಗತ್) ಯಿಾ ಸಮಸ್ತವಾದ ಪ್ರಪಂಚವೂ, (ಭಾಂತಂ) ಪ್ರಕಾಶಿಸುತ್ತಲಿರುವಂಥಾ, (ತಮೇವ) ಆ ಪರಮಾತ್ಮನನ್ನೇ, (ಅನುಭಾತಿ) ಅನುಸರಿಸಿ ಪ್ರಕಾಶಿಸುತ್ತಲಿಧೆಯೋ (ಶ್ರೀಗುರುಮೂರ್ತಯೆ—ತಸ್ಮೈಶ್ರೀ ದಕ್ಷಿಣಾಮೂರ್ತಯೆ—ಇದಂ ನಮಃ) ಗುರುಮೂರ್ತಿಯಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ಸಮಸ್ಕಾರವೆಂದು ಶ್ಲೋಕಾರ್ಥ.

ತಾ || ಕೇವಲ ಚಿನ್ಮಾತ್ರಸ್ವರೂಪನಾದ ಪರಮಾತ್ಮನೇ ನೇತ್ರಮೊದಲಾದ ಇಂದ್ರಿಯಗಳಿಂದ ರೂಪಗ್ರಹಣ ಮೊದಲಾದ ಆಯಾಯ ಕಾರ್ಯಗಳಂ ಮಾಡುವನೆಂತಲೂ ಈ ಅರ್ಥವಂ ತಿಳಿಯದ ಅಜ್ಞಾನಿಗಳಾದ ಜನಗಳು ಆ ಪರಮಾತ್ಮನ ಜ್ಞಾನದಿಂದಲೇ ವಿಷಯಗಳಂ ತಿಳಿಯುತ್ತಲಿದ್ದಾಗ್ಯೂ ತಾವೇ ತಿಳಿಯುವೆವೆಂದು ಭ್ರಾಂತಿಪಡುವರೆಂತಲೂ ಜ್ಞಾನರೂಪದಿಂ ಜೀವಬ್ರಹ್ಮರಿಗೆ ಅಭೇದವು ಸ್ಪಷ್ಟವಾಗಿ ಕಾಣುತ್ತಲಿರುವದೆಂತಲೂ ತಾತ್ಪರ್ಯ. ||೪||

ಮೂ॥ ದೇಹಂ ಪ್ರಾಣಮಪೀಂದ್ರಿಯಾಣ್ಯಪಿಚ ಲಾಂ ಬುದ್ಧಿಂಚ ಶೂನ್ಯಂ ವಿದುಃ ಸ್ತ್ರೀಬಾಲಾಂಧ ಜಡೋಪಮಾಸ್ತ್ವಹಮಿತಿ ಭ್ರಾಂತಾಭೃಶಂ ವಾದಿನಃ । ಮಾಯಾಶಕ್ತಿ ವಿಲಾಸಕಲ್ಪಿತ ಮಹಾವ್ಯಾಮೋಹ ಸಂಹಾರಿಣೇ ತಸ್ಮೈ ಶ್ರೀಗುರು—

ಟೀಕಾ॥ (ಸ್ತ್ರೀ ಬಾಲಾಂಧ ಜಡೋಪಮಾಃ) ಹೆಂಗಸರಿಗೂ, ಹುಡುಗರಿಗೂ, ಕುರುಡರಿಗೂ, ಅಚೇತನವಾದ ಪದಾರ್ಥಗಳಿಗೂ ಸರಿಯಾದಂಥಾ, (ವಾದಿನಸ್ತು) ಚಾರ್ವಾಕಾದಿಗಳಾದರೋ, (ಭೃಶಂ) ಅತ್ಯಂತವಾಗಿ, (ಭ್ರಾಂತಾಸ್ಸಂತಃ) ಯಾವನ ಸ್ವರೂಪಜ್ಞಾನದಲ್ಲಿ, ಭ್ರಮೆಪಟ್ಟಂಥವರಾಗಿ, (ದೇಹಂ) ಶರೀರವನ್ನು, (ಪ್ರಾಣಮಪಿ) ಪ್ರಾಣವಾಯುವನ್ನೂ, (ಇಂದ್ರಿಯಾಣ್ಯಪಿ) ನೇತ್ರಮೊದಲಾದ ಇಂದ್ರಿಯಗಳನ್ನೂ, (ಚಲಾಂ) ಕ್ಷಣಿಕವಾದಂಥಾ, (ಬುದ್ಧಿಂಚ) ಜ್ಞಾನವನ್ನೂ, (ಶೂನ್ಯಂ) ಏನೂ ಇಲ್ಲದ ಶೂನ್ಯಪದಾರ್ಥವನ್ನೂ, (ಅಹಮಿತಿ) ನಾನೆನುತ ಆತ್ಮನೆಂದು,

(ವಿದುಃ) ತಿಳಿಯುತ್ತಾರೆಯೋ, (ಮಾಯಾಶಕ್ತಿವಿಲಾಸಕಲ್ಪಿತಮಹಾವ್ಯಾಮೋಹ ಸಂಹಾರಿಣೇ) ಮಾಯಾಶಕ್ತಿ ವಿಲಾಸ-ಮಾಯಾಶಕ್ತಿ-ಮೂಲಾಜ್ಞಾನ ಶಕ್ತಿಯ ಪ್ರಕಾಶದಿಂದ, ಕಲ್ಪಿತ-ಉಂಟುಮಾಡಲ್ಪಟ್ಟಂಥಾ, ಮಹಾವ್ಯಾಮೋಹ-ಮಹತ್ತಾದ ಅಜ್ಞಾನವನ್ನು ಸಂಹಾರಿಣೇ-ಪರಿಹರಿಸುತ್ತಲಿರುವಂಥಾ (ಶ್ರೀಗುರುಮೂರ್ತಯೆ-ತಸ್ಮೈಶ್ರೀ ದಕ್ಷಿಣಾಮೂರ್ತಯೆ-ಇದಂನಮಃ) ಗುರುವಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ॥ ಶ್ರುತಿಗಳಂ ಧಿಕ್ಕರಿಸುವ ಪಾಪಿಗಳಿಗೆ ಅಜ್ಞಾನವನ್ನುಂಟುಮಾಡುವವನೂ, ಶ್ರುತಿರಹಸ್ಯವಂ ವಿಚಾರಿಸುವವರಿಗೆ ಅಜ್ಞಾನವಂ ಪರಿಹರಿಸುವವನೂ ಕೂಡ ಪರಮಾತ್ಮನೆಂದು ತಾತ್ಪರ್ಯ. ॥೫॥

ಮೂ॥ ರಾಹುಗ್ರಸ್ತದಿವಾಕರೇಂದು ಸದೃಶೋ
ಮಾಯಾಸಮಾಚ್ಛಾದನಾತ್ ಸನ್ಮಾತ್ರಃ
ಕರಣೋಪಸಂಹರಣತೋಯೋಽಭೂತ್ಸುಷು
ಪ್ತಃ ಪುಮಾನ್ । ಪ್ರಾಗಸ್ವಾಪ್ಸಮಿತಿ ಪ್ರ

ಬೋಧ ಸಮಯೇ ಯಃ ಪ್ರತ್ಯಭಿಜ್ಞಾಯ ತೇ ತಸ್ಮೈ ಶ್ರೀಗುರುಮೂರ್ತಯೇ—

ಟೀಕಾ ॥ (ಮಾಯಾಸಮಾಚ್ಛಾದನಾತ್) ಮೂಲಾಜ್ಞಾನವಾವರಿಸುವದರಿಂದ, (ರಾಹುಗ್ರಸ್ತದಿವಾಕರೇಂದುಸದೃಶಃ) ರಾಹುವಿನಿಂದ ಪೀಡಿಸಲ್ಪಟ್ಟ ಸೂರ್ಯಚಂದ್ರರಿಗೆ ಸಮಾನನಾದಂಥಾ (ಸನ್ಮಾತ್ರಃ) ಸತ್ತಾಮಾತ್ರಸ್ವರೂಪನಾದಂಥಾ, (ಯಃಪುಮಾನ್) ಯಾವ ಪುರುಷನು, (ಕರಣೋಪಸಂಹರಣತಃ) ಮನಸ್ಸು ಮೊದಲಾದ ಕರಣಗಳು ಹೊರಗಣವ್ಯಾಪಾರದಿಂ ಹಿಂತಿರುಗವದ್ದರಿಂದ, (ಸುಷುಪ್ತಃ) ನಿದ್ರೆಗೈಯುವಂಥಾವನು, (ಅಭೂತ್) ಆದನೋ, (ಪ್ರಬೋಧಸಮಯೆ) ಎಚ್ಚರವಾಗುವಲ್ಲಿ, (ಪ್ರಾಕ್) ಪೂರ್ವದಲ್ಲಿ, (ಅಸ್ವಾಪ್ಸಮಿತಿ) ನಿದ್ರೆಗೈದೆನೆಂದು, (ಯಃ) ಯಾವನು, (ಪ್ರತ್ಯಭಿಜ್ಞಾಯತೇ) ತಿಳಿಯಲ್ಪಡುತ್ತಾನೆಯೋ, (ಶ್ರೀಗುರುಮೂರ್ತಯೆ-ತಸ್ಮೈಶ್ರೀ ದಕ್ಷಿಣಾಮೂರ್ತಯೆ-ಇದಂನಮಃ (ಗುರುವಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ || ಆತ್ಮನಿಗೆ ಶೂನ್ಯಭಾವವೆಂದಿಗೂ ಸಂಭವಿಸಲಾರದೆಂದು ತಾತ್ಪರ್ಯ. ||೬||

ಮೂ || ಬಾಲ್ಯಾದಿಷ್ವಪಿ ಜಾಗ್ರದಾದಿಷುತಥಾ
ಸರ್ವಾಸ್ವವಸ್ಥಾಸ್ವಪಿ ವ್ಯಾವೃತ್ತಾಸ್ವನುವರ್ತ
ಮಾನಮಹ ಮಿತ್ಯಂತ ಸ್ಫುರಂತಂಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ
ಯೋಮುದ್ರಯಾ ಭದ್ರಯಾ ತಸ್ಮೈಶ್ರೀ
ಗುರುಮೂರ್ತಯೇ—

ಟೀಕಾ|| (ಬಾಲ್ಯಾದಿಷು) ಬಾಲ್ಯ ಮೊದಲಾದಂಥಾ, (ಜಾಗ್ರದಾದಿಷು) ಜಾಗರ ನೊದಲಾದಂಥಾ, (ತಥಾ) ಹಾಗೇ, (ಸರ್ವಾಸ್ವವಸ್ಥಾಸ್ವಪಿ) ಜನನಮರಣ, ಮೂರ್ಛಾ, ಸಮಾಧಿ, ಸುಖದುಃಖ, ಶ್ರವಣ ಮನನ, ಕರ್ತೃತ್ವ ಭೋಕ್ತೃತ್ವ ಮೊದಲಾದ ಸಮಸ್ತಾವಸ್ಥೆಗಳೂ, (ವ್ಯಾವೃತ್ತಾಸುಸತೀಷು) ಕುಂಬಾರ ಚಕ್ರದಂತೆ ತಿರುಗುತ್ತಿರಲಾಗಿ, (ಅನುವರ್ತಮಾನಂ) ಅನುಸರಿಸಿರುವಂಥಾ, (ಅಹಮಿತಿ) ನಾನೆಂದು, (ಅಂತಃ) ಅಂತರಂಗದಲ್ಲಿ, (ಸದಾ) ಸರ್ವಕಾ

ಲದಲ್ಲೂ, (ಸ್ಫುರಂತಂ) ಪ್ರಕಾಶಿಸುತ್ತಲಿರುವಂಥಾ, (ಸ್ವಾತ್ಮಾನಂ) ಸ್ವಸ್ವರೂಪಕ್ಕೆ ಅಭಿನ್ನವಾದ ಆತ್ಮನನ್ನು, (ಯಃ) ಯಾವನು, (ಭದ್ರಯಾ) ಮಂಗಳಕರವಾದಂಥಾ, (ಮುದ್ರಯಾ) ಚಿನ್ಮುದ್ರೆಯಿಂದ, (ಭಜತಾಂ) ಸೇವಿಸುವರಿಗೆ, (ಪ್ರಕಟೀಕರೋತಿ) ಪ್ರಕಟವಾಗಿ ತೋರಿಸುತ್ತಾನೆಯೊ (ಶ್ರೀಗುರುಮೂರ್ತಯೆ-ತಸ್ಮೈಶ್ರೀ ಗುರುಮೂರ್ತಯೆ-ಇದಂನಮಃ) ಗುರುವಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ ॥ ಜೀವನು ಪರಮಾತ್ಮನಿಗೆ ಭಿನ್ನವಾದರೆ ವ್ಯಾಪಕತ್ವ ಎಲ್ಲಿಂದ ಬಂದೀತೆಂದು ತಾತ್ಪರ್ಯ. ॥೭॥

ಮೂ ॥ ವಿಶ್ವಂ ಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬಂಧತಃ ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ । ಸ್ವಪ್ನೇ ಜಾಗ್ರತಿವಾ ಯಏಷಪುರುಷೋ ಮಾಯಾಪರಿಭ್ರಾಮಿತಃ ತಸ್ಮೈ ಶ್ರೀಗುರುಮೂರ್ತಯೆ

ಟೀಕಾ || (ಯಏಷಪುರುಷಃ) ಯಾವ ಈ ಪುರುಷನು, (ಸ್ವಪ್ನೆ) ಸ್ವಪ್ನದಲ್ಲೂ, (ಜಾಗ್ರತಿವಾ) ಜಾಗ್ರದವಸ್ಥೆಯಲ್ಲೂ, (ಮಾಯಾಪರಿಭ್ರಾಮಿತಸ್ಸನ್) ಸ್ವರೂಪಾಜ್ಞಾನದಿಂದ ಭ್ರಾಂತಿಪಡಿಸಲ್ಪಟ್ಟಂಥಾವನಾಗಿ, (ಕಾರ್ಯಕಾರಣತಯಾ) ಕಾರ್ಯಕಾರಣಭಾವದಿಂದಲೂ, (ಸ್ವಸ್ವಾಮಿಸಂಬಂಧತಃ) ಸೇವಕೇಶ್ವರ ಸಂಬಂಧದಿಂದಲೂ, (ಶಿಷ್ಯಾಚಾರ್ಯತಯಾ) ಶಿಷ್ಯಗುರುಭಾವದಿಂದಲೂ, (ತಥೈವ) ಹಾಗೆಯೆ, (ಪಿತೃಪುತ್ರಾದ್ಯಾತ್ಮನಾ) ತಂದೆ ಮಗ ಮೊದಲಾದ ಸ್ವಭಾವದಿಂದಲೂ, (ಭೇದತಃ) ಭೇದದ ದೃಷ್ಟಿಯಿಂದ, (ವಿಶ್ವಂ) ಪ್ರಪಂಚವನ್ನೂ, (ಪಶ್ಯತಿ) ನೋಡುತ್ತಾನೆಯೊ, (ಶ್ರೀಗುರುಮೂರ್ತಯೆ--ಶ್ರೀದಕ್ಷಿಣಾಮೂರ್ತಯೆ-ಇದಂನಮಃ) ಗುರುವಾದ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ.

ತಾ || ಲೋಕಾಚಾರಸ್ಥಾಪನೆಗೋಸುಗ ಭೇದಜ್ಞಾನವನ್ನುಂಟುಮಾಡಿಕೊಂಡು ಪರಮಾತ್ಮನೇ ಕ್ರೀಡಿಸುತ್ತಿರುವನೆಂದು ತಾತ್ಪರ್ಯ. ||೮||

ಮೂ ॥ ಭೂರಂಭಾಂಸ್ಯನಲೋಽನಿಲೋಽಂಬರಮ ಹರ್ನಾಥೋ ಹಿಮಾಂಶುಃ ಪುಮಾನ್ ಇತ್ಯಾ ಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಂ । ನಾನ್ಯತ್ಕಿಂಚನವಿದ್ಯತೇ ವಿ ಮೃಶತಾಂ ಯಸ್ಮಾತ್ಪರಸ್ಮಾದ್ವಿಭೋಃ ತಸ್ಮೈ ಶ್ರೀ ಗುರು ಮೂರ್ತಯೇ—

ಟೀಕಾ ॥ (ಭೂಃ) ಭೂಮಿ, (ಅಂಭಾಂಸಿ) ಉದಕ ಗಳು, (ಅನಲಃ) ಅಗ್ನಿಯು, (ಅನಿಲಃ) ವಾಯುವು, (ಅಂ ಬರಂ) ಆಕಾಶವು, (ಅಹರ್ನಾಥಃ) ಸೂರ್ಯನು, (ಹಿಮಾಂ ಶುಃ) ಚಂದ್ರನು, (ಪುಮಾನ್) ನಾನೆಂದು ಪೇಳುವ ಪುರು ಷನು, (ಇತಿ) ಹೀಗೆಂದು, (ಚರಾಚರಾತ್ಮಕಂ) ಸ್ಥಾವರ ಜಂಗಮಸ್ವರೂಪವಾದಂಥಾ, (ಯಸ್ಯ) ಯಾವನ, (ಇದಂ ಮೂರ್ತ್ಯಷ್ಟಕಮೇವ) ಈ ಎಂಟು ಬಗೆಯಾದ ರೂಪವೇ, (ಆಭಾತಿ) ಪ್ರಕಾಶಿಸುತ್ತಲಿಧೆಯೊ, (ಪರಸ್ಮಾತ್) ಸರ್ವೋ ತ್ತಮನಾದಂಥಾ, (ವಿಭೋಃ) ಸರ್ವವ್ಯಾಪಕನಾದಂಥಾ,

(ಯಸ್ಮಾತ್) ಯಾವನಿಗಿಂತ, (ಅನ್ಯತ್) ಭಿನ್ನವಾದಂಥಾದ್ದಾಗಿ, (ಕಿಂಚಿನ) ಯಾವದೂ, (ವಿಮೃಶತಾಂ) ಆಲೋಚನೆಮಾಡುವಂಥಾವರಿಗೆ, (ನವಿದ್ಯತೆ) ಇಲ್ಲವೋ, ಶ್ರೀಗುರುಮೂರ್ತಯೆ-ತಸ್ಮೈಶ್ರೀ ದಕ್ಷಿಣಾಮೂರ್ತಯೆ-ಇದಂ ನಮಃ ಗುರುವಾದ ಆ ದಕ್ಷಿಣಾಮೂರ್ತಿಗೋಸ್ಕರ ಈ ನಮಸ್ಕಾರವೆಂದು ಶ್ಲೋಕಾರ್ಥ. ॥೯॥

ತಾ ॥ ಶರೀರದಲ್ಲಿ ಸೂರ್ಯಚಂದ್ರಸ್ಥಾನಕ್ಕೆ ಸ್ವರಗತಿಗಳನ್ನಾಗಲೀ ಬುದ್ಧಿಮನಸ್ಸುಗಳನ್ನಾಗಲೀ ಗ್ರಹಿಸತಕ್ಕದ್ದೆಂದು ತಾತ್ಪರ್ಯ. ॥೯॥

ಮೂ॥ ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯ
ಸ್ಮಾದಮುಷ್ಮಿನ್ ಸ್ತವೇ । ತೇನಾಸ್ಯಶ್ರವಣಾ
ತ್ತದರ್ಥ ಮನನಾದ್ಧ್ಯಾನಾಚ್ಚ ಸಂಕೀರ್ತ
ನಾತ್ । ಸರ್ವಾತ್ಮತ್ವ ಮಹಾವಿಭೂತಿಸಹಿ
ತಂಸ್ಯಾದೀಶ್ವರತ್ವಂ ಸ್ವತಃ ಸಿಧ್ಯೇತತ್ಪುನರಷ್ಟ
ಧಾ ಪರಿಣತಂ ಚೈಶ್ವರ್ಯಮವ್ಯಾಹತಂ—

ಟೀಕಾ॥ (ಇತಿ) ಈ ಪ್ರಕಾರವಾಗಿ, (ಅಮುಷ್ಮಿನ್ ಸ್ತವೇ) ಈ ಸ್ತೋತ್ರದಲ್ಲಿ, (ಯಸ್ಮಾತ್) ಯಾವಕಾರಣದ್ದೆಶೆಯಿಂದ, (ಇದಂ ಸರ್ವಾತ್ಮತ್ವಂ) ಈ ಸರ್ವಾತ್ಮಭಾವವವು, (ಸ್ಫುಟೀಕೃತಂ) ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿತೊ, (ತೇನ) ಆಕಾರಣದಿಂದ, (ಅಸ್ಯ) ಈ ಸ್ತೋತ್ರದ, (ಶ್ರವಣಾತ್) ಅರ್ಥವಿಚಾರದಿಂದಲೂ, (ತದರ್ಥಮನನಾತ್) ಆ ಅರ್ಥದ ಅನುಸಂಧಾನದಿಂದಲೂ, (ಧ್ಯಾನಾತ್) ಆ ಅರ್ಥದ ನಿಶ್ಚಯಜ್ಞಾನದಿಂದಲೂ, (ಸಂಕೀರ್ತನಾತ್ ಚ) ಸ್ತುತಿಪಾರಾಯಣವಂ ಮಾಡುತ್ತಾ ಅರ್ಥವಂ ಪೇಳುವದ್ದರಿಂದಲೂ ಕೂಡ, (ಸರ್ವಾತ್ಮತ್ವ ಮಹಾವಿಭೂತಿ ಸಹಿತಂ) ಸರ್ವಾತ್ಮಭಾವರೂಪವಾಗಿ ಮಹತ್ತಾದ ಸಿದ್ಧಿಯಿಂ ಕೂಡಿರುವಂಥಾ (ಈಶ್ವರತ್ವಂ) ಸತ್ಯಜ್ಞಾನಾನಂದ ಲಕ್ಷಣವಾದ ಐಶ್ವರ್ಯವು (ಸ್ವತಃ) ತಾನಾಗಿಯೆ, (ಸ್ಯಾತ್) ಸಿದ್ಧವಾದೀತು (ಪುನಃ) ಮತ್ತು, (ಅಷ್ಟಧಾಪರಿಣತಂ) ಅಣಿಮಾದಿರೂಪಗಳಿಂದೆಂಟು ಬಗೆಯಾದಂಥಾ, (ತದೈಶ್ವರ್ಯಂಚ) ಆ ಐಶ್ವರ್ಯವೂ ಕೂಡ,

(ಅವ್ಯಾಹತಂ) ಅಪ್ರತಿಹತವಾಗಿ, (ಸಿದ್ಧ್ಯೇತ್) ಸಿದ್ಧಿಸೀತು ಎಂದು ಶ್ಲೋಕಾರ್ಥ.

ತಾ || ಈ ಸ್ತೋತ್ರವು ಮೂರ್ತ್ಯಷ್ಟಕವನ್ನುದ್ದೇಶಿಸಿ ಹುಟ್ಟಿರುವದ್ದರಿಂದ ಅಷ್ಟಕವೆನಿಸುವುದು.

ಇತಿ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯಕೃತ
ದಕ್ಷಿಣಾಮೂರ್ತಿ ಸ್ತೋತ್ರಂ
ಸಂಪೂರ್ಣಂ.

ಇಂತು ಶ್ರೀಮಚ್ಛಂಕರಾಚಾರ್ಯರು ಮಾಡಿದ ದಕ್ಷಿಣಾಮೂರ್ತಿ
ಸ್ತೋತ್ರಕ್ಕೆ ಆತ್ಮರಾಮಯೋಗೀಕೃತ ಪ್ರತಿಪದ
ಟೀಕಾ ತಾತ್ಪರ್ಯ ಸಮಾಪ್ತಾ

|| ಓಂ ತತ್ಸತ್ ||

ವೇದಾಂತ ಗ್ರಂಥಗಳು.

ಶ್ರೀಮದ್ಭಗವದ್ಗೀತಾ ಗೂಢಾರ್ಥ ದೀಪಿಕಾ (ಪೂರ್ವಭಾಗ)	೪	೮	೦
,, ,, (ಉತ್ತರಭಾಗ)	೫	೮	೦
ಸಿದ್ಧಾಂತ ಬಿಂದು ಪ್ರಕಾಶ	೧	೦	೦
ಶ್ರೀ ವಿಚಾರದೀಪಿಕಾ	೧	೦	೦
ವೇದಾಂತ ದೀಪಿಕಾ	೦	೬	೦
ಜೀವನ್ಮುಕ್ತಿಗೀತಾ	೦	೪	೦
ಮುಮುಕ್ಷು ಸೋಪಾನ	೦	೮	೦
ಭಜಗೋವಿಂದ ಸ್ತೋತ್ರ	೦	೧	೦
ಶ್ರೀಮಚ್ಛಂಕರಾಚಾರ್ಯಕೃತ ದಕ್ಷಿಣಾಮೂರ್ತಿ ಸ್ತೋತ್ರ	೦	೧	೦
ಪಂಚರತ್ನಮಾಲಾ	೦	೦	೯
ವೇದಾಂತ ಯುಕ್ತಿಪ್ರಕಾಶ	೧	೪	೦
ವಿಜ್ಞಾನ ನೌಕಾ	೧	೪	೦
ಕನ್ನಡ ಗುರುಗೀತಾ, ಚಿದಾನಂದ ಪಂಚೀಕರಣ, (ವೇದಾಂತ ವಿವಿಧ ವಿಷಯಾವಳಿ ಸಹಿತ)	೦	೬	೦

ಮೇಲ್ಕಂಡ ಗ್ರಂಥಗಳು ಕನ್ನಡ ಟೀಕಿನೊಡನೆ ಉತ್ತಮತರದ ಕಾಗದದಲ್ಲಿ ಮುದ್ರಿಸಿರುವದು ಪೋಸ್ಟೇಜು ಪ್ರತ್ಯೇಕ ಬೀಳುವದು.

ವಿಳಾಸ:— **ವೇದಾಂತ ಸುಬ್ಬಯ್ಯನವರು,**

ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು.